

ಜಗ್ ಜಗ್ ನಕುನ ನಕುನಾ ನಕುನಾ ಜಗ್ ಜಗ್ ನಕುನ ನಕುನಾ ನಕುನಾ... ತಮಟೆಯ ಸದ್ದು ಲಯಬದ್ಧವಾಗಿ ಉಲಿಯುತ್ತಿತ್ತು. ತಮಟೆಯವನ ಹಿಂದೆ ಆ ಲಯಕ್ಕೆ ತಕ್ಕುನಾಗಿ ಹೆಜ್ಜೆ ಹಾಕುತ್ತಿತ್ತೊಂದು ಹಣ್ಣಾದ ಜೀವ. ವಯಸ್ಸು ಅರವತ್ತು ದಾಟಿರಬಹುದು. ಆದರೂ ಕುಂದದ ಉತ್ಸಾಹ. ಆಕೆಯ ಹಿಂದೆ ಒಂದಷ್ಟು ಜನ ನಿಧಾನವಾಗಿ ಹೆಜ್ಜೆ ಹಾಕುತ್ತಿದ್ದರು. ಅವರ ಮುಖದಲ್ಲಿ ದುಗುಡ ಮಡುಗಟ್ಟಿದಂತಿತ್ತು. ಜೊತೆಗೆ ಅಜ್ಜಿಯ ನೃತ್ಯವನ್ನು ನೋಡಿ ರಸ್ತೆಯಲ್ಲಿ ಹೋಗುವ ಜನ ಏನೆಂದುಕೊಳ್ಳುತ್ತಾರೋ ಎಂಬ ಆತಂಕವೂ.

ಇದ್ಯಾವುದರ ಪರಿವೆಯೇ ಇಲ್ಲದಂತೆ ಮಲಗಿದ್ದ ಹೆಣವನ್ನು ಹೊತ್ತ ನಾಲ್ವರು ಯಾಂತ್ರಿಕವಾಗಿ ನಡೆಯುತ್ತಿದ್ದರು. ಆಗಾಗ ಹೆಗಲು ಬದಲಾಯಿಸುತ್ತಿದ್ದರು. ಹೆಣದ ಭಾರ ಗೊತ್ತಾಗದಿರಲೆಂದು ಆಗೀಗ ಮಾತನಾಡುತ್ತಿದ್ದರು. ಪಕ್ಕದಲ್ಲೊಬ್ಬ ಯುವಕ ಎಡಗೈಯಲ್ಲೊಂದು ಬುಟ್ಟಿ ಹಿಡಿದು ಅದರಲ್ಲಿದ್ದ ಬಿಡಿ ಹೂವುಗಳನ್ನೂ, ಕಡಲೆಪುರಿಯನ್ನೂ, ಚಿಲ್ಲರೆ ಕಾಸನ್ನೂ ಹೆಣದ ಮೇಲೆ ಆಗಾಗ ಎಸೆಯುತ್ತಲಿದ್ದ. ಸುಮಾರು 20 ಜನರಿದ್ದ ಈ ಗುಂಪಿನಿಂದ ತುಸುವೇ ದೂರದಲ್ಲಿ ಐದಾರು ಚಿಳ್ಳೆ ಪಿಳ್ಳೆಗಳ ಗುಂಪಿತ್ತು. ಹೆಣಕ್ಕೂ ಅವರಿಗೂ ಯಾವುದೇ ಸಂಬಂಧವಿರಲಿಲ್ಲ. ಕೆದರಿದ ಕೂದಲು, ಹರಿದ ಅಂಗಿ, ಆಸೆಗಣ್ಣಿನ ಅವರು ಹೆಣದ ಮೇಲೆ ಬಿದ್ದ ಎಂಟಾಣೆ, ಪಾವಲಿ, ರೂಪಾಯಿ ಕಾಸನ್ನು ಆಯ್ದುಕೊಳ್ಳಲು ಕಾತರರಾಗಿದ್ದರು. ಹತ್ತಿರದ ಸ್ಲಂನಲ್ಲಿ ಅವರ ವಾಸ.

ಲಾಲ್‌ಬಾಗಿನ ಮುಂಭಾಗದಿಂದ ಹೊರಟ ಈ ಹೆಣ ಮೆರವಣಿಗೆ ಶಾಂತಿನಗರ ಬಸ್ ನಿಲ್ದಾಣದ ಬಳಿ ಬಲಕ್ಕೆ ಹೊರಳಿ ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರಕ್ಕೆ ಕಾಲಿಟ್ಟ ಕೂಡಲೇ ತಮಟೆಯ ಸದ್ದು ನಿಂತಿತು. ಅಜ್ಜಿಯ ಹೆಜ್ಜೆಗಳೂ ಸುಮ್ಮಕಾದವು. ಚಿಲ್ಲರೆ ಕಾಸಿನ ಬುಟ್ಟಿಯೂ ಖಾಲಿಯಾಗಿತ್ತು. ಚಿಳ್ಳೆ ಪಿಳ್ಳೆಗಳು ಸಿಕ್ಕಿದ್ದೇ ಸೀರುಂಡೆ ಅಂದುಕೊಂಡು ವಾಪಸ್ಸು ಹೋದರು.

ಮುಂದೆ ನಡೆದಿದ್ದು ತುಂಬು ಜೀವನ ನಡೆಸಿದ್ದ ಆಳುದ್ದದ ಆಕೃತಿಯೊಂದು ವಿದ್ಯುತ್ ಯಂತ್ರದಲ್ಲಿ ತೂರಿ ಹಿಡಿ ಬೂದಿಯಾಗುವ ಯಾಂತ್ರಿಕ ಕ್ರಿಯೆ. ಎಳೆಬಿಸಿಲು ಬಲಿಯುವ ಮುನ್ನವೇ ಆ ಹಿರಿಯ ಜೀವದ ಪಯಣ ಕೊನೆಯಾಗಿತ್ತು.

★★★

ಪ್ರೆಸ್ ಕ್ಲಬ್ಬಿನಲ್ಲಿ ಕುಳಿತು ತಾನು ಬರೆದ ವರದಿಯ ಆರಂಭದ ಸಾಲುಗಳನ್ನು ಪದೇ ಪದೇ ಓದಿ ಪುಳಕಗೊಂಡ ವೆಂಕಟೇಶ್. ಪದಗಳ ಬಳಕೆ, ಭಾಷೆಯ ಮೇಲಿನ ಹಿಡಿತ ಹಾಗೂ ಹಂದರ ಅದ್ಭುತವಾಗಿದೆ ಎನ್ನಿಸಿತು ಅವನಿಗೆ. ಇದನ್ನು ಕಂಡ ತನ್ನ ಸಂಪಾದಕರು 'ವೆರಿ ಗುಡ್' ಎಂದು ಬೆನ್ನು ತಟ್ಟುವುದನ್ನು ಕಲ್ಪಿಸಿಕೊಂಡು ಮುಖದಲ್ಲಿ ಖುಷಿ ಉಕ್ಕಿತು. ತನ್ನ ವರದಿಯಲ್ಲಿ ಬರುವ ಪಾತ್ರಗಳು, ನೈಜ ಸನ್ನಿವೇಶ ಓದುಗರ ಮನ ಸೆಳೆಯುವುದರಲ್ಲಿ ಅನುಮಾನವೇ ಇಲ್ಲ ಅಂದುಕೊಂಡ. ಈ ಪುಳಕವನ್ನು ಹಂಚಿಕೊಳ್ಳಲು ಗೆಳೆಯ ಪ್ರಸನ್ನನಿಗೆ ಬರಹೇಳಿದ್ದ.

ಇತ್ತೀಚೆಗಷ್ಟೇ ಪತ್ರಿಕೆ ಸೇರಿದ್ದ ವೆಂಕಟೇಶನಿಗೆ ಅವನ ಸಂಪಾದಕರು ವಿಚಿತ್ರ ಅಸೈನ್‌ಮೆಂಟ್ ನೀಡಿದ್ದರು. ಏನೆಂದರೆ, ಯಾವುದಾದರೊಂದು ಮನೆಯಲ್ಲಿ ಒಂದು ಸಾವು ಸಂಭವಿಸಿದಾಗ ಅಲ್ಲಿ ನಡೆಯುವ ಒಟ್ಟೂ ಪ್ರಕ್ರಿಯೆಗಳು, ಜನರ ಭಾವನೆ, ವರ್ತನೆ, ಮಾತುಕತೆ